## ಸೈಕಲ್‌ಮೀಟರ್

ವೇಗದ ನಡಿಗೆ ಮಾಡುವವರಿಗೆ, ಓಡುವವರಿಗೆ ಹೆಜ್ಜೆಗಳ ಸಂಖ್ಯೆ ಅಳೆಯಲು, ವೇಗ ಅಳೆಯಲು ಸಾಕಷ್ಟು ಆ್ಯಪ್‌ಗಳಿವೆ. ಆದರೆ ವ್ಯಾಯಾಮಕ್ಕಾಗಿ ಸೈಕ್ಲಿಂಗ್ ಮಾಡುವವರಿಗೆ ಕೆಲವೇ ಕೆಲವು ಆ್ಯಪ್‌ಗಳಿದ್ದು, ಇವುಗಳಲ್ಲಿ ಐಫೋನ್‌ನ ಸೈಕಲ್‌ಮೀಟರ್ ಉತ್ತಮವಾದ ಆ್ಯಪ್. ಇದು ನೀವು ಸೈಕಲ್ ತುಳಿದಾಗ ಅದನ್ನು ಮ್ಯಾಪ್ ಮಾಡುತ್ತದೆ, ವೇಗ ಮತ್ತು ದೂರವನ್ನು ದಾಖಲಿಸುತ್ತದೆ. ಎಲ್ಲಾ ಅಂಶಗಳನ್ನು ಗ್ರಾಫ್ ಮತ್ತು ಟೇಬಲ್ ಮೂಲಕ ನೀಡುತ್ತದೆ.




## ಆ್ಯಪ್ಸ್ ಸ್ಕ್ರೀನ್

ಡಿಫಾಲ್ಟ್ ಆಗಿ ವಿಂಡೋಸ್ 8.1 ಸ್ಕ್ರೀನ್ ಕಾಣಿಸುವುದರ ಬದಲು ಆ್ಯಪ್ಸ್ ಸ್ಕ್ರೀನ್ ಹಾಕಿಕೊಳ್ಳಬಹುದು. ಡೆಸ್ಕ್‌ಟಾಪ್ ತೆರೆದು ಟಾಸ್ಕ್‌ಬಾರ್ ಮೇಲೆ ಬಲಗಡೆ ಕ್ಲಿಕ್ ಮಾಡಿ. ಪ್ರಾಪರ್ಟೀಸ್ ವಿಂಡೋನಲ್ಲಿ ನೆವಿಗೇಶನ್ ಟ್ಯಾಬ್ ಮೇಲೆ ಕ್ಲಿಕ್ ಮಾಡಿ. ಸ್ಟಾರ್ಟ್ ಸ್ಕ್ರೀನ್ ವಿಭಾಗದಲ್ಲಿ ಆ್ಯಪ್ಸ್ ವ್ಯೂ ಆಟೋಮೆಟಿಕಲಿ ಮೇಲೆ ಓಕೆ ಮಾಡಿ. ಈಗ ಸ್ಟಾರ್ಟ್ ಬಟನ್ ಮೇಲೆ ಕ್ಲಿಕ್ ಮಾಡಿದರೆ ಆ್ಯಪ್ ಸ್ಕ್ರೀನ್ ಕಾಣಿಸುತ್ತದೆ.




## ಅನ್‌ರೆಡ್ ಮೇಲ್

ಜಿ ಮೇಲ್ ಇನ್‌ಬಾಕ್ಸ್‌ನಲ್ಲಿ ಅಷ್ಟು ಮುಖ್ಯವಲ್ಲದ ಮೇಲ್‌ಗಳ ಸಂಖ್ಯೆ ಜಾಸ್ತಿಯಾದರೆ ಅವುಗಳನ್ನು ಫಿಲ್ಟರ್ ಮಾಡುವ ಸರಳ ಉಪಾಯ ಇಲ್ಲಿದೆ. ಪ್ರತಿಯೊಂದು ಪುಟಗಳನ್ನು ತೆರೆಯುವ ಕಷ್ಟವಿಲ್ಲದೇ ಅನ್‌ರೆಡ್ ಮೇಲ್‌ಗಳನ್ನು ರೆಡ್ ಎಂದು ಮಾರ್ಕ್ ಮಾಡಲು ಜಿಮೇಲ್ ಹೊಸ ಟ್ಯಾಬ್ ಸವಲತ್ತು ನೀಡಿದೆ. ಮೊದಲು ಇನ್‌ಬಾಕ್ಸ್ ಟ್ಯಾಬ್‌ಗಳನ್ನು ಡಿಸೇಬಲ್ ಮಾಡಿ. ಇನ್‌ಬಾಕ್ಸ್‌ನ ಎಡ ಮೂಲೆಯಲ್ಲಿರುವ ಬಾಕ್ಸ್ ಮೇಲೆ ಕ್ಲಿಕ್ ಮಾಡಿ. ಈಗ ಡ್ರಾಪ್‌ಡೌನ್ ಮೆನುವಿನಲ್ಲಿ 'ಆಲ್' ಎಂದು ಆಯ್ಕೆ ಮಾಡಿ. ಬಾಕ್ಸ್‌ನಲ್ಲಿ 'ಕಾನ್ವರ್‌ಸೇಷನ್' ಲಿಂಕ್ ಮೇಲೆ ಕ್ಲಿಕ್ ಮಾಡಿ 'ರೆಡ್' ಎಂದು ಮಾರ್ಕ್ ಮಾಡಿ. ಮತ್ತೆ ಸೆಟಿಂಗ್ಸ್‌ಗೆ ಹೋಗಿ ಎನೆಬಲ್ ಮಾಡಿದರಾಯ್ತು.



## ಮೊಬೈಲ್‌ನಲ್ಲಿ ಎವ್ರಿವೇರ್ ಟೀವಿ

ಟಾಟಾ ಸ್ಕೈ ನಿಮ್ಮ ಮೊಬೈಲ್ ಹ್ಯಾಂಡ್‌ಸೆಟ್‌ನಲ್ಲಿ ಲೈವ್ ಟೀವಿ, ಕ್ಯಾಚ್ ಅಪ್ ಟೀವಿ ಮತ್ತು ಬೇಡಿಕೆ ಮೇರೆಗೆ ವೀಡಿಯೊ ಸೇವೆ ನೀಡಲಿದೆ. ಟಾಟಾ ಸ್ಕೈ ಚಂದಾದಾರರಿಗೆ ಲಭ್ಯವಾಗಲಿರುವ ಈ ಸೇವೆಯನ್ನು ಆ್ಯಪಲ್ ಮತ್ತು ಆ್ಯಂಡ್ರಾಯ್ಡ್ ಸ್ಟೋರ್‌ಗಳಿಂದ ಟಾಟಾ ಸ್ಕೈ ಮೊಬೈಲ್ ತಂತ್ರಾಂಶಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಮೂಲಕ ಪಡೆದುಕೊಳ್ಳಬಹುದು. ಈ ಮೊಬೈಲ್ ತಂತ್ರಾಂಶ ಅನೇಕ ಉಚಿತ ಸೇವೆಗಳನ್ನು ಬೆಂಬಲಿಸುತ್ತದೆ.

ಲೈವ್ ಟೀವಿ: 54 ಕ್ಕೂ ಹೆಚ್ಚು ಟೀವಿ ಚಾನೆಲ್‌ಗಳಲ್ಲಿ ಪ್ರಸಾರವಾಗುವ ನಿಮ್ಮ ನೆಚ್ಚಿನ ಕಾರ್ಯಕ್ರಮಗಳ ನೇರ ಪ್ರಸಾರವನ್ನು ವೀಕ್ಷಿಸಬಹುದು. ಕ್ಯಾಚ್ ಅಪ್ ಟೀವಿ: ನಿಮ್ಮ ನೆಚ್ಚಿನ ಕಾರ್ಯಕ್ರಮಗಳ ಹಿಂದಿನ ಐದು ದಿನಗಳ ಸಂಚಿಕೆಗಳನ್ನು ಚಂದಾದಾರರು ವೀಕ್ಷಿಸಬಹುದು. ವಿಡಿಯೋ ಆನ್ ಡಿಮ್ಯಾಂಡ್(ವಿಓಡಿ): ನಿಮ್ಮ ಹ್ಯಾಂಡ್ ಹೆಲ್ಡ್ ಸಾಧನಗಳಲ್ಲಿ ಚಲನಚಿತ್ರಗಳು ಹಾಗೂ ಡೂ ಇಟ್ ಯುವರ್‌ಸೆಲ್ಫ್ ವಿಡಿಯೋಗಳು ಸೇರಿದಂತೆ ನೂರಕ್ಕೂ ಹೆಚ್ಚು ವಿಡಿಯೋಗಳನ್ನು ನೇರ ಪ್ರಸಾರ ವಾಹಿನಿ ಮೂಲಕ ಚಂದಾದಾರರು ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದು ಟಾಟಾ ಸ್ಕೈ ಪ್ರಧಾನ ವಾಣಿಜ್ಯ ಅಧಿಕಾರಿ ವಿಕ್ರಂ ಮೆಹ್ರಾ ತಿಳಿಸಿದ್ದಾರೆ.

■ ಎಸ್. ತುಂಬೆ